**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 04.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀಮತಿ ಎಲ್ ಜಿ ಜಿ ವಕೀಲರಿಂದಃ**

ಪ್ರತಿವಾದಿ ನಂ.1 ದಾವಾ ಆಸ್ತಿಯನ್ನು ಪ್ರತಿವಾದಿ ನಂ.2 ಬ್ಯಾಂಕಿನ ಹತ್ತಿರ ಅಡಮಾನವಿಟ್ಟು ಸಾಲ ಪಡೆದಿರುತ್ತಾರೆ ಎಂದರೆ ಸರಿ. ನಾನು ಪ್ರತಿವಾದಿ ನಂ.1 ಇವರ ಜೊತೆ ಖರೀದಿ ಕರಾರುಪತ್ರ ಮಾಡಿಕೊಳ್ಳುವ ಪೂರ್ವದಲ್ಲಿಯೇ ದಾವಾ ಆಸ್ತಿಯ ಮೇಲೆ ಪ್ರತಿವಾದಿ ನಂ.2 ಬ್ಯಾಂಕಿನ ಭೋಜಾ ಇತ್ತು ಎಂದರೆ ಸರಿ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ನಾನು ಹಾಗೂ ಪ್ರತಿವಾದಿ ನಂ.1 ಮಿಲಾಪೆಯಾಗಿ ಪ್ರತಿವಾದಿ ನಂ.2 ಬ್ಯಾಂಕಿನವರಿಗೆ ತೊಂದರೆ ನೀಡುವ ಉದ್ದೇಶದಿಂದ ಖರೀದಿ ಕರಾರುಪತ್ರ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ಖರೀದಿ ಕರಾರುಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ನೀವು ಪ್ರತಿವಾದಿ ನಂ.2 ಬ್ಯಾಂಕಿನವರ ಅನುಮತಿ ಪಡೆದಿಲ್ಲ ಎಂದರೆ ಸಾಕ್ಷಿ ಇಲ್ಲ ಪ್ರತಿವಾದಿ ನಂ.1 ಸಾಲವನ್ನು ತೀರಿಸಿ ಆಸ್ತಿ ಮಾರಾಟ ಮಾಡುತ್ತೇನೆಂದು ಹೇಳಿದ್ದರು ಎಂದು ನುಡಿಯುತ್ತಾರೆ. ಈ ಕಾರಣಕ್ಕಾಗಿ ಬ್ಯಾಂಕ್ ಭೋಜಾ ಇದ್ದ ಕಾರಣ ನಾನು ಪ್ರತಿವಾದಿ ನಂ.1 ಇವರ ಜೊತೆ ಮಾಡಿಕೊಂಡ ಖರೀದಿ ವ್ಯವಹಾರ ಅಸಿಂಧುವಾಗಿರುತ್ತದೆ ಎಂದರೆ ಸಾಕ್ಷಿ ಪ್ರತಿವಾದಿ ನಂ.1 ಸಾಲವನ್ನು ತೀರಿಸಿ ಆಸ್ತಿ ಮಾರಾಟ ಮಾಡುತ್ತೇನೆಂದು ಹೇಳಿದ್ದರು ಎಂದು ನುಡಿಯುತ್ತಾರೆ. ನಾನು ಪ್ರತಿವಾದಿ ನಂ.1 ಇವರ ಜೊತೆ ಮಾಡಿಕೊಂಡ ಖರೀದಿ ಕರಾರುಪತ್ರ ಪ್ರತಿವಾದಿ ನಂ.2 ಬ್ಯಾಂಕಿನವರಿಗೆ ಬಂಧನಕಾರಿಯಲ್ಲ ಎಂದರೆ ಸರಿ. ಪ್ರತಿವಾದಿ ನಂ.2 ಇವರ ಬ್ಯಾಂಕ್ ಭೊಜಾ ತೀರಿಸದೇ ಇರುವ ಹೊರತು ದಾವಾ ಆಸ್ತಿಯನ್ನು ಪರಭಾರೆ ಮಾಡಲು ಬರುವುದಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**